
ಕವಿತೆ

# ಬುದ್ಧನಲ್ಲಿ ಮೈತ್ರಿ ಭ್ರಾಂತಿಯಿರದ ಕ್ರಾಂತಿ




ಗುಣವನರಿದು ಶೀಲ ಹಿಡಿದು
ತನ್ನ ಗೆಲಲು ಸಿರಿಯನೊದ್ದು
ಎದ್ದು ಹೊರಟ ದೂರ ದೂರ
ಮರಳಿ ಬರಲು ಹತ್ತಿರ.

ಎದ್ದ ಎದ್ದು ಹೋದ ಮೌನ
ಲೋಕ ನಿದ್ದೆ ಹೋದ ಹೊತ್ತು
ಗಗನ ಮೌನ, ಚುಕ್ಕಿ ಮೌನ

ಅಡಿಯ ಅಡಿಯ ಭೂಮಿ ಮೌನ
ಮೈಯನಪ್ಪೊ ಗಾಳಿ ತಂಪು ಮೌನ
ಮೌನ ತರು, ಹಕ್ಕಿ ಗೂಡು ಮೌನ
ಕೀಚಕೀರು ಕೀಟವಂದು ಮೌನ
ಮೌನದಲ್ಲಿ ಮೌನ ಯಾನ.

ಬಯಲ ಎಡೆಗೆ
ಪಂಚಭೂತ ಬಾಹುಗಳಿಗೆ
ಮಹಾಯಾನ ನಡೆದ ವೇಳೆ
ಬೆಳಕಿಗಾಗಿ ಹುಡುಕುತಿತ್ತು ಕತ್ತಲು.

ತಳಮಳ ಕಳವಳ ತಲ್ಲಣಗಳಿಗೆ
ಹಜ್ಜೆ ಗುರುತು ಹತ್ತದಂತೆ
ವಜ್ಜೆ ಬಿಡದೆ ಗಾಳಿಯಷ್ಟೆ
ಹಗುರ ಹೆಜ್ಜೆ ಊರಿ ಹೋದ.

ಆಸೆ ಅಳಲು ಶೋಕದುಸಿರು
ಸಿದ್ಧಾರ್ಥನೆಂಬ ಹೆಸರಿನಲ್ಲೆ ಕಳೆದ
ಸ್ಮರಣೆ ಕೂಗು ಕರೆ ಅವನ
ಮೌನ ಕಿವಿಯ ತಲುಪಲಿಲ್ಲ.

ಕಲ್ಲು ಮೃದುಲ ಹೃದಯವಾಗೆ
ಬುದ್ಧನಾಗಿ ಎದ್ದು ನಿಂತ
ಕತ್ತಲಲ್ಲಿ ಬೆಳಕು ಚಾಚಿ
ತಲ್ಲಣಕ್ಕೆ ಸೌಖ್ಯವಾದ.

ಯುಗಯುಗಗಳ ಉದ್ದ ಬುದ್ಧ
ಯುದ್ಧ ಯುದ್ಧ ಗೆಲುವ
ಶಾಂತಿ ಸಿದ್ಧ ಲೋಕ ಬದ್ಧ
ಬುದ್ಧನಲ್ಲಿ ಮೈತ್ರಿ ಭ್ರಾಂತಿಯಿರದ ಕ್ರಾಂತಿ.

● ಸ. ರಘುನಾಥ